# ಮೊಬೈಲ್ ಶಿಸ್ತು ಮಕ್ಕಳಿಗೂ ಪಾಲಕರಿಗೂ

ಮಕ್ಕಳಿಗೆ ಯಾವುದಾದರೂ ಸಂಗತಿಯನ್ನು ಹೇಳಿಕೊಡುವುದೆಂದರೆ, ಅದು ಪಾಲಕರು ಕಲಿಯುವ ಕ್ರಿಯೆಯೂ ಹೌದು.

■ ಸ್ವಯಂಪ್ರಭಾ



ಮನೆಯಲ್ಲಿ ಮೊಬೈಲ್ ಪರಿಣತರಾಗಿರುವ ಮಕ್ಕಳ ಬಗ್ಗೆ ದೊಡ್ಡವರು ಹೆಮ್ಮೆಪಡುವುದುಂಟು. ಹಲವು ಮನೆಗಳಲ್ಲಿ ಆನ್‌ಲೈನ್ ವಹಿವಾಟುಗಳನ್ನೆಲ್ಲ ಎಳೆಯರಿಗೊಪ್ಪಿಸಿ ದೊಡ್ಡವರು ನಿರುಮ್ಮಳರಾಗಿ ಇರುವುದೂ ಇದೆ. ಆದರೆ ಈ ಆನ್‌ಲೈನ್ ವ್ಯವಹಾರದಲ್ಲಿ ಮಕ್ಕಳಿಗೆ ತಿಳಿಯುವ ವಿಚಾರಗಳು ಅವರ ಬಳಿಯೇ ಎಷ್ಟು ಸುರಕ್ಷಿತವಾಗಿ ಉಳಿಯುತ್ತವೆ?

ಏಳನೇ ತರಗತಿಯಲ್ಲಿ ಓದುವ ಸಾನ್ವಿ ತನ್ನ ಮನೆಯಲ್ಲಿ ಮೊಬೈಲ್ ತಜ್ಞೆ. ಅಪ್ಪನ ಎಟಿಎಂ ಕಾರ್ಡಿನ ಪಿನ್ ನಂಬರ್, ಕ್ರೆಡಿಟ್ ಕಾರ್ಡ್ ನಂಬರ್‌ಗಳು, ಜಿಮೇಲ್ ಮತ್ತು ಆಫೀಸ್ ಇಮೇಲ್‌ನ ಪಾಸ್‌ವರ್ಡ್ – ಇವೆಲ್ಲವನ್ನೂ ನೀಟಾಗಿ ನೆನಪಿಟ್ಟುಕೊಳ್ಳುವ ಸಾನ್ವಿ ಚುರುಕುಮತಿಯ ಹುಡುಗಿ.

ಸಮಸ್ಯೆಯಾದುದು ಇಲ್ಲಿಯೇ. ಎಲ್ಲ ಪಾಸ್‌ವರ್ಡ್‌ಗಳನ್ನೂ ಅವಳು ಮೊಬೈಲ್‌ನಲ್ಲಿ ನಮೂದಿಸಿದ್ದಳು. ಎಟಿಎಂ ಕಾರ್ಡ್‌ನ ಫೋಟೊ ತೆಗೆದಿರಿಸಿಕೊಂಡಿದ್ದು, ಅದು ಮೊಬೈಲ್ ಗ್ಯಾಲರಿಯಲ್ಲಿಯೇ ಇತ್ತು. ಜಿಮೇಲ್ ಅಂತೂ ಲಾಗಿನ್ ಆಗಿಯೇ ಇದ್ದುದರಿಂದ, ಬ್ಯಾಂಕ್ ಸ್ಟೇಟ್‌ಮೆಂಟ್‌ಗಳು, ಬಿಲ್ ಪಾವತಿಸಿದ ಮಾಹಿತಿ, ಲಾಗಿನ್ ಮಾಹಿತಿಗಳೆಲ್ಲವೂ ಗೋಚರಿಸುವಂತೆಯೇ ಇದ್ದವು.

ಬಹುತೇಕ ಮನೆಯ ಇಡೀ ಹಣಕಾಸು ವ್ಯವಸ್ಥೆಯ ಸೂತ್ರ ಸಾನ್ವಿಯ ಕೈಯಲ್ಲಿತ್ತು. ಈ ಪಾಸ್‌ವರ್ಡ್‌ಗಳ ಹಿಂದೆ ಇಡೀ ಕುಟುಂಬದ ಜೀವನವೇ ಅಡಗಿದೆ ಎಂದು ಆ ಪುಟ್ಟ ಹುಡುಗಿಗೆ ಹೇಗೆ ತಿಳಿಯಬೇಕು? ಅಷ್ಟನ್ನೆಲ್ಲ ಗ್ರಹಿಸುವ ವಯಸ್ಸೂ ಅವಳದಲ್ಲ. ಅಪ್ಪ ಅಮ್ಮನಿಗೆ ತಿಳಿಯದ ವಿಷಯ ತನಗೆ ತಿಳಿದಿದೆ ಎಂಬ ಹೆಮ್ಮೆಯಷ್ಟೇ ಅವಳದು. ಆ ಒಮ್ಮೆ, ಪೆಟ್ರೋಲ್ ಬಂಕ್‌ನಲ್ಲಿ ಅಪ್ಪ ಬ್ಯಾಂಕಿನ ಕಾರ್ಡ್ ಹೊರತೆಗೆದಾಗ, 'ನನಗ್ ಗೊತ್ತು' ಎನ್ನುತ್ತ ಪಿನ್ ನಂಬರ್ ಗಟ್ಟಿಯಾಗಿ ಹೇಳಿದ್ದಳು. ಆಗಲೇ ಪರಿಸ್ಥಿತಿ ಎಷ್ಟರ ಮಟ್ಟಿಗೆ ಮುಂದುವರೆದುಬಿಟ್ಟಿದೆ ಎಂಬ ಜ್ಞಾನೋದಯ ಅವಳ ಅಪ್ಪನಿಗೆ ಆದುದು. ಆ ಜ್ಞಾನೋದಯ ಮುಂದಿನ ಸಂಭಾವ್ಯ ಅಪಾಯವನ್ನು ತಪ್ಪಿಸಿತು.

ಮೊಬೈಲ್ ಮತ್ತು ಕಂಪ್ಯೂಟರ್ ಜ್ಞಾನ ಮಕ್ಕಳಲ್ಲಿ ಅವರಿಗೆ ಅರಿವಿಲ್ಲದಂತೆಯೇ ಸಣ್ಣ ಮಟ್ಟಿಗಿನ ಅಹಂಕಾರವನ್ನೂ ಮೂಡಿಸುತ್ತದೆ. ಝೂಮ್ ಮೀಟಿಂಗ್‌ನಲ್ಲಿ ಭಾಗವಹಿಸಲು ಸಹಾಯ ಮಾಡಲು ಕರೆಯುವ ಪಕ್ಕದ ಮನೆಯ ಪ್ರೊಫೆಸರ್ ಆಂಟಿ, ಕ್ಲಬ್ ಹೌಸ್‌ನಿಂದ ಹೊರಬರುವುದು ಹೇಗೆ ಎಂದು ಕೇಳುವ ಮೇಲಿನ ಮನೆಯ ಮೇಷ್ಟರು, ಪೇಟಿಎಂ ಕೂಪನ್ ಅನ್ನು ಕನ್‌ವರ್ಟ್ ಮಾಡುವುದು ಹೇಗೆ ಎಂದು ತನ್ನ ಬಳಿಯೇ ಕೇಳುವ ದೊಡ್ಡಮ್ಮ... ಹೀಗೆ ಸಾನ್ವಿಗೆ ತಾನು ಎಲ್ಲ ಸಮಸ್ಯೆಯನ್ನು ಪರಿಹರಿಸುವ ಸಮರ್ಥಳು ಎಂದು ಅನಿಸುವುದುಂಟು. ಎಲ್ಲ ಮಕ್ಕಳಿಗೂ ಹೀಗೆ ಅನಿಸುವುದು ಸಹಜ. ಹಿರಿಯರಿಗೆ ಏನೂ ತಿಳಿಯದು ಎನ್ನುವ ಭಾವನೆಯಿಂದ ಅವರ ಮನಸ್ಸು ಬೀಗಿರುತ್ತದೆ.

ಮಕ್ಕಳ ಕೈಗೆ ಹಣಕಾಸಿನ ಜವಾಬ್ದಾರಿಯನ್ನು ಸಾರಾಸಗಟಾಗಿ ಒಪ್ಪಿಸುವುದು ಸರಿಯಲ್ಲ ಎಂಬುದನ್ನು ಅಪ್ಪ ಅಮ್ಮ ಅರಿತಿರಬೇಕು. ಆನ್‌ಲೈನ್ ವ್ಯವಹಾರ ನಡೆಸಲು ಏನೆಲ್ಲ ಮುನ್ನೆಚ್ಚರಿಕೆ ವಹಿಸಬೇಕು ಎನ್ನುವುದನ್ನು ತಂತ್ರಜ್ಞಾನ ಬಲ್ಲ ಇತರರೊಡನೆ ಸಮಾಲೋಚನೆ ಮಾಡಬೇಕು. ಸರಳವಾಗಿ ತಿಳಿಯುವ ಕ್ರಮಗಳನ್ನು ಅನುಸರಿಸಲು ಮರೆಯುವುದು ಅಥವಾ ನಿರ್ಲಕ್ಷ್ಯ ಮಾಡುವುದು ಸರಿಯಲ್ಲ. ಹೀಗೆ ಮುನ್ನೆಚ್ಚರಿಕೆ ವಹಿಸಬೇಕಾದ ಸಂದರ್ಭಗಳ ಕೆಲವು ಉದಾಹರಣೆಗಳು:

- ಆನ್‌ಲೈನ್ ಶಾಪಿಂಗ್‌ಗೆ ಬಳಸುವ ಬ್ಯಾಂಕ್ ಕಾರ್ಡ್ ಪ್ರತ್ಯೇಕ ಇರಲಿ. ವೇತನ ಬರುವ ಖಾತೆಯ ನಂಬರ್ ಮತ್ತು ಕಾರ್ಡ್ ಅನ್ನು ಆನ್‌ಲೈನ್ ಶಾಪಿಂಗ್‌ಗೆ ಬಳಸಬೇಡಿ.
- ಪಾಸ್‌ವರ್ಡ್‌ಗಳನ್ನು ಪದೇ ಪದೇ ಬದಲಿಸುತ್ತ ಇರುವ ಜವಾಬ್ದಾರಿಯನ್ನು ದೊಡ್ಡವರು ವಹಿಸಿಕೊಳ್ಳಬೇಕು. ಅವುಗಳನ್ನು ಒಂದೆಡೆ ಬರೆದಿಡಬೇಕಾಗಿ ಬಂದರೂ, ಬರೆದಿಡುವ ರೀತಿಯನ್ನೂ ಬದಲಾಯಿಸಬೇಕು. ಇ–ಮೇಲ್ ಪಾಸ್‌ವರ್ಡ್ ಎಂದು ಬರೆಯುವ ಬದಲಾಗಿ, ಸಾಂಕೇತಿಕವಾಗಿ ಉಲ್ಲೇಖಿಸುವುದು ಒಳ್ಳೆಯದು.
- ವೇತನ ಬರುವ ಖಾತೆಯ ಎಟಿಎಂ ಕಾರ್ಡ್ ಅನ್ನು ಮಕ್ಕಳ ಕೈಗೆ ಸಿಗದಂತೆ ಕಾಪಾಡಿಕೊಳ್ಳಬೇಕು.
- ತಮ್ಮದೇ ಮೊಬೈಲ್‌ನ ಡಿಪಿಯನ್ನು ಮಕ್ಕಳು ಬದಲಿಸಿದ್ದಾರಾ ಎಂದು ಖಚಿತಪಡಿಸಿಕೊಳ್ಳಬೇಕು. ಯಾಕೆಂದರೆ ನಮ್ಮ ಸಾನ್ವಿ ಒಮ್ಮೆ ನೆಕ್ಲೇಸ್ ಧರಿಸಿದ ಬಳಿಕ ಬಾಗಿಲು ತೆರೆದಿಟ್ಟ ಬೀರು ಮುಂದೆಯೇ ತೆಗೆದ ಸೆಲ್ಫಿಯನ್ನು ಡಿಪಿಯನ್ನಾಗಿ ಮಾಡಿಬಿಟ್ಟಿದ್ದಳು. ಮತ್ತೊಮ್ಮೆ ವಾಟ್ಸ್‌ಆ್ಯಪ್ ಸ್ಟೇಟಸ್‌ನಲ್ಲಿ – **you can massage me anytime** ಎಂದು ದಾಖಲಿಸಿ ಫಜೀತಿ ತಂದಿಟ್ಟಿದ್ದಳು.

ಹೀಗೆ ಕೆಲವು ಮುನ್ನೆಚ್ಚರಿಕೆಗಳನ್ನು ವಹಿಸುವುದರಿಂದ ಅನಾಹುತಗಳಿಂದ ದೂರ ಇರುವುದಷ್ಟೇ ಅಲ್ಲ, ಆನ್‌ಲೈನ್ ಚಟುವಟಿಕೆಗಳು ಹೇಗೆ ಶಿಸ್ತುಬದ್ಧವಾಗಿರಬೇಕು ಎಂಬುದನ್ನು ಮಕ್ಕಳಿಗೆ ಪರೋಕ್ಷವಾಗಿ ತಿಳಿಸಿಕೊಟ್ಟಂತೆಯೂ ಆಗುತ್ತದೆ.

ಪ್ರತಿಕ್ರಿಯಿಸಿ: feedback@sudha.co.in